ಮೂಡಿಗೆರೆ ತಾಲ್ಲೂಕು ದಾರದಹಳ್ಳಿ ಊರಬಾಗಿಲು ಕೆರೆ ದುರಸ್ತಿ

464 (243): ಶ್ರೀಮತಿ ಮೋಟಮ್ಮ (ಮೂಡಿಗೆರೆ):–

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ತಾಲ್ಲೂಕಿನ ದಾರದಹಳ್ಳಿ ಊರ ಬಾಗಿಲು ಕೆರೆ ದುರಸ್ತಿ ಕಾರ್ಯ ಯಾವಾಗ ಮಂಜೂರಾಯಿತು;

ಆ) ಅದಕ್ಕಾಗಿ ಎಷ್ಟು ಹಣ ಮಂಜೂರು ಮಾಡಲಾಗಿದೆ ಹಾಗೂ ಎಷ್ಟು ಪ್ರದೇಶದ ಜಮೀನಿಗೆ ನೀರು ಒದಗಿಸಲಾಗುವುದು;

ಇ) ಇದರ ದುರಸ್ತಿ ಕಾರ್ಯ ಪ್ರಾರಂಭ ಮಾಡದಿರಲು ಕಾರಣವೇನು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ದಿ: 2-1-91ರಂದು ಮಂಜೂರಾಗಿದೆ.

ಆ) 7.50 ಲಕ್ಷ ರೂ.ಗಳಿಗೆ ಮಂಜೂರು ಮಾಡಲಾಗಿದೆ.

38.80 ಹೆಕ್ಟೇರುಗಳಿಗೆ ನೀರೊದಗಿಸಲಾಗುವುದು

ಇ) ಈ ಕಾಮಗಾರಿಗೆ 1992-93 ಸಾಲಿನಲ್ಲಿ 3.00 ಲಕ್ಷ ರೂ.ಗಳ ಅನುದಾನ ದೊರೆತಿದ್ದು ಜಿಲ್ಲಾಪರಿಷತ್ತಿನಿಂದ ಕಾಮಗಾರಿಯು ಈಗಾಗಲೇ ಪ್ರಾರಂಭಗೊಂಡಿದೆ. ಇತ್ತೀಚೆಗೆ ಈ ಕಾಮಗಾರಿಯನ್ನು ಸಣ್ಣ ನೀರಾವರಿ ವಲಯ ವಹಿಸಿಕೊಂಡಿದ್ದು ಅದನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸಿಂಧನೂರು ತಾಲ್ಲೂಕಿನಲ್ಲಿ ರಾಷ್ಟ್ರೀಯ ನೀರು ಸರಬರಾಜು ಯೋಜನೆ

465 (341): ಶ್ರೀ ಬಿ. ಹಂಪನಗೌಡ (ಸಿಂಧನೂರು):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಿಂಧನೂರು ತಾಲ್ಲೂಕಿನಲ್ಲಿಯ 55ನೇ ಹಾಗೂ 40ನೇ ಉಪ ಕಾಲುವೆಯನ್ನು (ಎನ್.ಡಬ್ಲ್ಯು.ಎಂ.ಪಿ.) ರಾಷ್ಟ್ರೀಯ ನೀರು ಸರಬರಾಜು ಯೋಜನೆಯಲ್ಲಿ ತೆಗೆದುಕೊಳ್ಳುವ ಉದ್ದೇಶವು ಸರ್ಕಾರಕ್ಕೆ ಇರುವುದೇ;

ಆ) ಹಾಗಿದ್ದಲ್ಲಿ ಈ ಕಾಲುವೆಯ ದುರಸ್ತಿ ಕೆಲಸಗಳನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ೫೫ನೇ ಉಪ ಕಾಲುವೆಯ ಪ್ರಸ್ತಾವನೆಯು ಇದೆ.

40ನೇ ಉಪಕಾಲುವೆಯ ಪ್ರಸ್ತಾವನೆಯು ಇರುವುದಿಲ್ಲ.

ಆ) ೧೯೯೩–೯೪ರಲ್ಲಿ ಪ್ರಾರಂಭಿಸುವ ಉದ್ದೇಶವಿದೆ.